## ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

## ಸತ್ರ ಪ್ರಕರಣ ಸಂಖ್ಯೆಃ 5058/2025

ಪ್ರಾ ಸಾ 1 ಚಾ ಸಾ 1

ಹೆಸರುಃ ಲತಾ

ಗಂಡನ ಹೆಸರುಃ ನಟರಾಜು

ವಯಸ್ಸುಃ 39 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಲಕ್ಷ್ಮೀಸಾಗರ

**ದಿಃ 05.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. ಚಾಸಾ 2 ನನ್ನ ಅಮ್ಮನ ತಮ್ಮ. ಚಾಸಾ3 ನನ್ನ ಸ್ವಂತ ತಮ್ಮ. ಚಾಸಾ 4 ರಿಂದ 8 ರವರು ನಮ್ಮ ಊರಿನವರು. ಅವರೆಲ್ಲಾ ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿ ಪ್ರದೀಪ ನನಗೆ ಗೊತ್ತು . ಆತ ನಮ್ಮ ಮನೆಯ ಪಕ್ಕದ ಮನೆಯವನು .

2 . ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿದ್ದೇನೆ . ನಾನು ಸಹಿ ಹಾಕುತ್ತೇನೆ . ಈಗ ನೋಡುತ್ತಿರುವ ಹೆಬ್ಬೆಟ್ಟಿನ ಗುರುತನ್ನು ನಾನೇ ಮಾಡಿರುತ್ತೇನೆ . ಅದನ್ನು ಮಂಡ್ಯ ದಲ್ಲಿ ಇರುವ ಡಿಆರ್ ಎಂ ಆಸ್ಪತ್ರೆಯಲ್ಲಿ ಹಾಕಿದ್ದೇನೆ . ಸುಮಾರು ಒಂದು ವರುಷದ ಹಿಂದೆ ಸದರಿ ಹೆಬ್ಬೆಟ್ಟನ್ನು ಹಾಕಿದ್ದೇನೆ.

ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದಿನ ಅವದಿಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)

ದಿಃ 18.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**ಮುಂದುವರೆದ ಮುಖ್ಯ ವಿಚಾರಣೆ** :
**ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

3. ಒಂದು ವರುಷದ ಹಿಂದೆ ನಾನು ಅನಾರೋಗ್ಯದ ನಿಮಿತ್ತ ಮಂಡ್ಯದ ಡಿ ಆರ್ ಎಂ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ ಆ ಸಂದರ್ಭದಲ್ಲಿ ಹೆಬ್ಬೆಟ್ಟಿನ ಗುರುತನ್ನು ಪೊಲೀಸರು ತೆಗೆದುಕೊಂಡಿರುತ್ತಾರೆ. ನಾನು ಒಂದು ವಾರ ಆಸ್ಪತ್ರೆಯಲ್ಲಿ ಇದ್ದೆ. ನಾನು ಹೆಬ್ಬೆಟ್ಟು ಹಾಕಿರುವ ದಾಖಲೆಯಲ್ಲಿ ಏನೇನು ಬರವಣಿಗೆಯಾಗಿದೆ ಎಂದು ಗೊತ್ತಿಲ್ಲ. ಹೆಬ್ಬೆಟ್ಟು ಹಾಕಿದ ನಂತರ ಪೊಲೀಸರು ನನ್ನಿಂದ ಯಾವುದೇ ಹೆಚ್ಚಿನ ಮಾಹಿತಿಗಳನ್ನು ತೆಗೆದುಕೊಂಡಿಲ್ಲ. ಹೆಬ್ಬೆಟ್ಟು ಹಾಕಿದ ನಂತರ ನಾನು ಪೊಲೀಸ್ ಠಾಣೆಗೆ ಹೋಗಿಲ್ಲ.

4. ಸಾಕ್ಷಿದಾರರಿಗೆ ಒಂದು ಪೊಟೋವನ್ನು ತೋರಿಸಲಾಗಿ ಸದರಿ ಪೊಟೋದಲ್ಲಿ ಕಾಣಿಸುತ್ತಿರುವ ಆಟೋ ಸಂಃ ಕೆಎ 11 ಬಿ 9970 ನ್ನು ಈ ಹಿಂದೆ ನೋಡಿರುವುದಿಲ್ಲ ಅದು ಯಾರಿಗೆ ಸೇರಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎನ್ನುತ್ತಾರೆ .

5. ಈಗ ನನಗೆ ತೋರಿಸಿರುವ ಕಬ್ಬಿಣದ ರಾಡನ್ನು ನಾನು ಈ

ಹಿಂದೆ ನೋಡಿಲ್ಲ.

6. ನಾನು ಈ ಹಿಂದೆ ಊರಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆ . ಅದನ್ನು ಬಿಟ್ಟು ಬೇರೆ ಯಾವುದೇ ಕೆಲಸವನ್ನು ಮಾಡಿರಲಿಲ್ಲ.

7. ಆರೋಪಿ ಪ್ರದೀಪನ ವಿರುದ್ದ ಯಾರು ದೂರನ್ನು ಕೊಟ್ಟಿದ್ದಾರೆ , ಏನು ಕೇಸು ಆಗಿದೆ ಎಂದು ನನಗೆ ಗೊತ್ತಿಲ್ಲ.

(ಈ ಸಾಕ್ಷಿಯು ತನ್ನ ಹೇಳಿಕೆಗೆ ವಿರುದ್ದವಾದ ಸಾಕ್ಷ್ಯವನ್ನು ನುಡಿದಿರುವುದರಿಂದ ಅಭಿಯೋಜಕರ ಕೋರಿಕೆಯಂತೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ.)

<u>ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ</u>

8. ನಾನು ಕಳೆದ ಐದಾರು ವರುಷಗಳಲ್ಲಿ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು 3 ಲಕ್ಷ ಹಣ ಸಂಪಾದನೆ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಆ ಹಣದಿಂದ ಊರಲ್ಲಿ ಮನೆ ಕಟ್ಟುವ ಉದ್ದೇಶದಿಂದ ಮತ್ತೆ ನನ್ನ ಊರಾದ ಲಕ್ಷ್ಮೀಸಾಗರಕ್ಕೆ ಬಂದಿದ್ದೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನನ್ನ ಗ್ರಾಮದ ಪರಿಚಯಸ್ಥರಾದ ಆರೋಪಿ ಪ್ರದೀಪನು ನನ್ನಿಂದ 2 ವರೆ ಲಕ್ಷ ರೂಪಾಯಿ ಹಣ ಸಾಲ

ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಅವರ ವಿಶ್ವಾಸದಾರರಾದ ಕಾರಣ ನಾನು ಯಾವುದೇ ಪತ್ರವನ್ನು ಬರೆಯದೇ ಹಣ ಕೊಟ್ಟಿದ್ದೆ ಎಂದರೆ ಸರಿಯಲ್ಲ.

9. ನಂತರದಲ್ಲಿ ನಾನು ಮನೆ ಕಟ್ಟಬೇಕು ಎನ್ನುವ ಉದ್ದೇಶದಿಂದ ಪ್ರದೀಪನಿಗೆ ನಾನು ಕೊಟ್ಟ ಹಣವನ್ನು ಹಿಂತಿರುಗಿಸು ಎಂದು ಕೇಳಿದ್ದೆ ಎಂದರೆ ಸರಿಯಲ್ಲ. ನಂತರದಲ್ಲಿ ಒಂದು ದಿನ ಪ್ರದೀಪನು ಹಣ ಕೊಡುತ್ತೇನೆ ಬಾ ಎಂದು ಹೇಳಿ ನಾನು ಜಕ್ಕನಹಳ್ಳಿಗೆ ಹೊಗಲೇಂದು ನರಹಳ್ಳಿ ಬಸ್ ನಿಲ್ದಾಣದ ಬಳಿ ನಿಂತಿದ್ದಾಗ ಆರೋಪಿ ಪ್ರದೀಪನು ಈಗ ಪೊಟೋದಲ್ಲಿ ತೋರಿಸಿದ ಕೆ ಎ 11 ಬಿ 9970 ಆಪೆ ಆಟೋದಲ್ಲಿ ದಿಃ 6.6.2025 ರಂದು ಸಂಜೆ 4 ಗಂಟೆಗೆ ಬಂದು ನನ್ನನ್ನು ಡ್ರೈವರ್ ಸೀಟ್ ನ ಬಳಿ ಕೂರಿಸಿಕೊಂಡು ಯಾವುದೋ ಒಂದು ಕಾಡು ರಸ್ತೆ ಯಲ್ಲಿಕಾಲುವೆ ಏರಿ ಮಾರ್ಗವಾಗಿ ಹೋಗಿ ಅಮೃತಿ ಗ್ರಾಮದ ಹತ್ತಿರ ಬೋರಾಪುರ ರಸ್ತೆಯಲ್ಲಿ ಮುಸುಕಿನ ಜೋಳ ಮತ್ತು ಇಟ್ಟಿಗೇಯ ಪ್ಯಾಕ್ಟರಿಯ ಸಮೀಪ ನಿರ್ಜನ ಪ್ರದೇಶದಲ್ಲಿ ನನ್ನನ್ನು ಆಟೋದಿಂದ ಕೆಳಕ್ಕೆ ಎಳೆದು ನನಗೆ ದುಡ್ಡು ಕೇಳುತ್ತೀಯಾ

ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದು ಕಾಲಿನಿಂದ ಹೊಟ್ಟೆಗೆ ಒದ್ದು ಈಗ ನ್ಯಾಯಾಲಯದ ಮುಂದೆ ತೋರಿಸಿದ ರಾಡಿನಿಂದ ನನ್ನ ಎಡಕಿವಿ ಮತ್ತು ತಲೆಯ ಎಡಬಾಗಕ್ಕೆ ಹೊಡೆದು ಕುತ್ತಿಗೆ ಹಿಸುಕಿ ಕೊಲೆ ಮಾಡಲು ಪ್ರಯತ್ನಿಸಿದ ಎಂದರೆ ಸರಿಯಲ್ಲ.

10. ಈ ಘಟನೆಯ ಸಂಬಂದ ನನಗೆ ತಲೆಗೆ ಎಡಕಿವಿಗೆ ಏಟಾದ್ದರಿಂದ ನಾನು ಪಾಂಡವಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದೆ ಎಂದರೆ ಸರಿಯಲ್ಲ. ಪಾಂಡವಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೆ ಎಂದರೆ ನಾನು ಮಂಡ್ಯದ ಆಸ್ಪತ್ರೆಯಲ್ಲಿ ಪಡೆದಿದ್ದೆ ಎನ್ನುತ್ತಾರೆ . ಆ ಸಂದರ್ಭದಲ್ಲಿ ಪೊಲೀಸರು ಬಂದು ಘಟನೆಯ ಬಗ್ಗೆ ನನ್ನನ್ನು ವಿಚಾರಣೆ ಮಾಡಿದಾಗ ಹೇಳಿಕೆ ದೂರು ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ದೂರನ್ನು ನಿಪಿ 1 ಎಂದು ಗುರುತಿಸಲಾಯಿತು.

11. ದಿಃ 10.6.2025 ರಂದು ಮತ್ತು 16.7.2025 ರಂದು ನಾನು ಆರೋಪಿತನು ನನ್ನನ್ನು ಕರೆದುಕೊಂಡು ಹೋಗಿದ್ದ ಆಟೋ

ಮತ್ತು ಹಲ್ಲೆ ಮಾಡಲು ಬಳಸಿದ ಕಬ್ಬಿಣದ ರಾಡನ್ನು ಗುರುತಿಸುವುದಾಗಿಯೂ , ನಿಪಿ 1 ದೂರಿಗೆ ಹೆಚ್ಚುವರಿ ಮಾಹಿತಿಯಾಗಿಯೂ ಮರು ಹೇಳಿಕೆಗಳನ್ನುನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ನಿರಾಕರಿಸಿದ ಮರು ಹೇಳಿಕೆಗಳನ್ನು ಕ್ರಮವಾಗಿ ನಿಪಿ 2 ಮತ್ತು 3 ಎಂದು ಗುರುತಿಸಲಾಯಿತು.

12. ಈ ಪ್ರಕರಣ ದಾಖಲಾದ ನಂತರ ಪ್ರದೀಪನು ನನಗೆ ಕೊಡಬೇಕಾಗಿದ್ದ ಸಾಲದ ಹಣವನ್ನು ನೀಡಿದ ಕಾರಣ ನಾವು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ 1 ದೂರಿನಲ್ಲಿ ತಿಳಿಸಲಾದಂತೆ ಘಟನೆ ನಡೆದಿದ್ದರೂ ಆರೋಪಿಯೊಂದಿಗೆ ರಾಜಿಯಾಗಿರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ
ಶ್ರೀ ಸಿ ಎಂ ಎಸ್ ವಕೀಲರಿಂದಃ

ಇರುವುದಿಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)